# B

SL. No. : YYY

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR**
**Revised & Un-Revised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 97-K** **Code No. : 97-K**

# ವಿಷಯ : ರಾಜ್ಯಶಾಸ್ತ್ರ
# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 25. 06. 2018 ] [ Date : 25. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ. ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದ ಮ್ಯಾಗ್ನಕಾರ್ಟ

   (A) 1773 ರ ರೆಗ್ಯೂಲೇಟಿಂಗ್ ಆ್ಯಕ್ಟ್

   (B) 1833 ರ ಚಾರ್ಟರ್ ಆ್ಯಕ್ಟ್

   (C) 1861 ರ ಶಾಸನ

   (D) 1858 ರ ಶಾಸನ

2. ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವುದು

   (A) ಸಮಾಜವಾದ

   (B) ಗಣರಾಜ್ಯ

   (C) ಜಾತ್ಯಾತೀತತೆ

   (D) ಕೋಮುವಾದ

3. ರಾಜ್ಯನೀತಿ ನಿರ್ದೇಶಾತ್ಮಕ ತತ್ವಗಳನ್ನು ನಾವು ಎರವಲು ಪಡೆದದ್ದು

   (A) ಐರ್ಲೆಂಡ್ ಸಂವಿಧಾನ

   (B) ಅಮೆರಿಕಾ ಸಂವಿಧಾನ

   (C) ಫ್ರೆಂಚ್ ಸಂವಿಧಾನ

   (D) ಸ್ವಿಟ್ಜರ್‌ಲ್ಯಾಂಡ್ ಸಂವಿಧಾನ

4. ಭಾರತದ ರಾಷ್ಟ್ರಪತಿಗಳಿಗೆ ಪ್ರಮಾಣವಚನ ಬೋಧಿಸುವವರು

   (A) ಭಾರತದ ಪ್ರಧಾನ ಮಂತ್ರಿಗಳು

   (B) ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು

   (C) ಭಾರತದ ಉಪ ರಾಷ್ಟ್ರಪತಿಗಳು

   (D) ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು

5. ಅಮೆರಿಕಾ ಸಂಯುಕ್ತ ಸಂಸ್ಥಾನದ ಮೇಲ್ಮನೆ

(A) ಡಯಟ್

(B) ಕಾಂಗ್ರೆಸ್

(C) ಸೆನೆಟ್

(D) ಹೌಸ್ ಆಫ್ ಲಾರ್ಡ್ಸ್

6. ರಾಜ್ಯಪಾಲರ ವೇತನ ಮತ್ತು ಭತ್ಯೆಗಳನ್ನು ನಿರ್ಧರಿಸುವವರು

(A) ಸರ್ವೋಚ್ಚ ನ್ಯಾಯಾಲಯ

(B) ಉಚ್ಚ ನ್ಯಾಯಾಲಯ

(C) ಸಂಸತ್ತು

(D) ರಾಜ್ಯ ಶಾಸಕಾಂಗ

7. ರಾಜ್ಯ ಸರ್ಕಾರವನ್ನು ವಜಾ ಮಾಡುವಂತೆ ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡುವವರು

(A) ಉಪರಾಷ್ಟ್ರಪತಿಗಳು

(B) ಸಭಾಪತಿಗಳು

(C) ಪ್ರಧಾನ ಮಂತ್ರಿಗಳು

(D) ರಾಜ್ಯಪಾಲರು

8. ನ್ಯಾಯ ವಿತರಣೆಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸುವ ನ್ಯಾಯಾಲಯ

(A) ಜನತಾ ನ್ಯಾಯಾಲಯ (ಲೋಕ ಅದಾಲತ್)

(B) ಜಿಲ್ಲಾ ನ್ಯಾಯಾಲಯಗಳು

(C) ಕಂದಾಯ ಮಂಡಳಿ

(D) ತಹಶೀಲ್ದಾರ್ ನ್ಯಾಯಾಲಯ

9. ರಾಷ್ಟ್ರಪತಿಗಳಿಗೆ ರಾಜ್ಯಪಾಲರ ನೇಮಕಾತಿಯಲ್ಲಿ ಶಿಫಾರಸ್ಸು ಮಾಡುವವರು

(A) ರಾಜ್ಯಸಭೆ

(B) ಸರ್ವೋಚ್ಚ ನ್ಯಾಯಾಲಯ

(C) ಕೇಂದ್ರ ಮಂತ್ರಿಮಂಡಲ

(D) ಕೇಂದ್ರ ಲೋಕಸೇವಾ ಆಯೋಗ

10. ಸರ್ವೋಚ್ಚ ನ್ಯಾಯಾಲಯದ ಕೇಂದ್ರ ಕಚೇರಿ ಇರುವುದು

(A) ಅಹಮದಾಬಾದ್

(B) ಕೊಲ್ಕತ್ತಾ

(C) ಮುಂಬೈ

(D) ನವ ದೆಹಲಿ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಭಾರತದ ಸಂವಿಧಾನ ರಚನಾ ಸಭೆಯ ಸ್ಥಾಪನೆಗೆ ಆಗ್ರಹಿಸಿದವರು ಯಾರು ?

12. ಯಾವ ಕಾಯ್ದೆಯು ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಮತು ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ ?

13. ಶೂನ್ಯವೇಳೆ ಎಂದರೇನು ?

14. ರಾಜ್ಯ ಚುನಾವಣಾ ಆಯುಕ್ತರನ್ನು ನೇಮಕ ಮಾಡವವರು ಯಾರು ?

15. ಗ್ರಾಹಕ ನ್ಯಾಯಾಲಯಗಳ ಮುಖ್ಯ ಉದ್ದೇಶವೇನು ?

16. ಕಂದಾಯ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?

17. ಕೌಟಿಲ್ಯನ ಕೃತಿಯನ್ನು ಹೆಸರಿಸಿ.

18. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರ ಅಧಿಕಾರಾವಧಿ ಎಷ್ಟು ?

19. ಹಂಗಾಮಿ ಸಭಾಧ್ಯಕ್ಷ ಎಂದರೇನು ?

20. ರಾಜ್ಯಪಾಲರು ಸುಗ್ರೀವಾಜ್ಞೆಗಳನ್ನು ಯಾವಾಗ ಹೊರಡಿಸುತ್ತಾರೆ ?

21. ಹಣಕಾಸಿನ ಮಸೂದೆಯನ್ನು ವಿಧಾನ ಪರಿಷತ್ ಎಷ್ಟು ದಿನಗಳವರೆಗೆ ತಡೆಹಿಡಿಯಬಹುದು ?

22. ಗ್ರಾಹಕ ರಕ್ಷಣಾ ಕಾಯ್ದೆಯನ್ನು ಯಾವಾಗ ಜಾರಿಗೊಳಿಸಲಾಯಿತು ?

23. ಭಾರತದ ಸ್ಥಳೀಯ ಸರ್ಕಾರ ವ್ಯವಸ್ಥೆಯ ಪಿತಾಮಹ ಎಂದು ಯಾರನ್ನು ಕರೆಯಲಾಗಿದೆ ?

24. ಸ್ವಾತಂತ್ರ್ಯನಂತರ ಭಾರತದಲ್ಲಿ ನೆಹರೂರವರು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಎಲ್ಲಿ ಉದ್ಘಾಟಿಸಿದರು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ವಿವರಿಸಿ.

26. ನ್ಯಾಯದ ವಿಧಗಳನ್ನು ತಿಳಿಸಿ.

27. ರಾಜ್ಯಸಭೆಯ ಸದಸ್ಯರಾಗಲು ಇರುವ ಅರ್ಹತೆಗಳೇನು ?

28. ರಾಜ್ಯಪಾಲರ ವಿವೇಚನಾಧಿಕಾರಗಳು ಯಾವುವು ?

29. ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ನೀಡಿರುವ ವಿನಾಯಿತಿಗಳು ಯಾವುವು ?

30. ದಂಡು ಪ್ರದೇಶ (ಕಂಟೋನ್ಮೆಂಟ್ ಬೋರ್ಡ್) ಗಳು ಎಂದರೇನು ?

31. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಸೇವೆಯಿಂದ ಹೇಗೆ ವಜಾಗೊಳಿಸಬಹುದು ?

32. ಇಂಗ್ಲೆಂಡ್ ಪ್ರಜಾಪ್ರಭುತ್ವ ರಾಷ್ಟ್ರವಾದರೂ, ಗಣರಾಜ್ಯವಲ್ಲ. ಏಕೆ ?

33. ಮೂಲಭೂತ ಹಕ್ಕುಗಳ ಲಕ್ಷಣಗಳನ್ನು ಹೆಸರಿಸಿ.

34. ಅವಿಶ್ವಾಸ ನಿರ್ಣಯವನ್ನು ವಿವರಿಸಿ.

35. ಜಂಟಿ ಲೋಕಸೇವಾ ಆಯೋಗವನ್ನು ಕುರಿತು ಬರೆಯಿರಿ.

36. ಭಾರತೀಯ ಸಂವಿಧಾನದಲ್ಲಿ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಏಕೆ ನಮೂದಿಸಲಾಗಿದೆ ?

37. ರಾಷ್ಟ್ರಪತಿಗಳ ತುರ್ತುಪರಿಸ್ಥಿತಿಯ ಅಧಿಕಾರಗಳನ್ನು ಬರೆಯಿರಿ.

38. ಸಾರ್ವಜನಿಕ ಹಿತಾಸಕ್ತಿ ಮೊಕದಮ್ಮೆ ಎಂದರೇನು ?

39. ವಿಧಾನ ಪರಿಷತ್ತಿನ ಅಗತ್ಯತೆ ಏನು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಭಾರತದ ಸಂವಿಧಾನದ ರಚನಾ ಸಭೆಯ ಕುರಿತು ಬರೆಯಿರಿ.

***ಅಥವಾ***

ರಾಷ್ಟ್ರದ ಐಕ್ಯತೆ ಮತ್ತು ಭಾವೈಕ್ಯತೆಯ ಕುರಿತು ಬರೆಯಿರಿ.

41. ಮೂಲಭೂತ ಹಕ್ಕುಗಳನ್ನು ರಕ್ಷಿಸಲು ನ್ಯಾಯಾಲಯವು ಹೊರಡಿಸುವ ಆಜ್ಞೆಗಳನ್ನು ಪಟ್ಟಿಮಾಡಿ.

***ಅಥವಾ***

ಮೂಲಭೂತ ಹಕ್ಕುಗಳಿಗೂ ಹಾಗೂ ರಾಜ್ಯನೀತಿ ನಿರ್ದೇಶಕ ತತ್ವಗಳಿಗೂ ಇರುವ ವ್ಯತ್ಯಾಸಗಳನ್ನು ಬರೆಯಿರಿ.

42. ರಾಷ್ಟ್ರಪತಿಗಳ ಶಾಸನೀಯ ಅಧಿಕಾರಗಳು ಯಾವುವು ?

***ಅಥವಾ***

ಲೋಕಸಭಾ ಸಭಾಪತಿಯವರ ಅಧಿಕಾರಗಳು ಯಾವುವು ?

43. ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಲು ಇರುವ ಅರ್ಹತೆಗಳೇನು ?

***ಅಥವಾ***

ಮುಖ್ಯಮಂತ್ರಿಗಳ ಕಾರ್ಯಗಳು ಯಾವುವು ?

44. ವಿಧಾನ ಪರಿಷತ್ ಹೇಗೆ ರಚನೆಗೊಂಡಿದೆ ?

**ಅಥವಾ**

ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ ?

45. ಕರ್ನಾಟಕದಲ್ಲಿ ನಗರ ಪಾಲಿಕೆಗಳನ್ನು ಹೊಂದಿರುವ ನಗರಗಳನ್ನು ಬರೆಯಿರಿ.

**ಅಥವಾ**

ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ಬರೆಯಿರಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಪ್ರಧಾನ ಮಂತ್ರಿಗಳ ಕಾರ್ಯಗಳನ್ನು ಪಟ್ಟಿಮಾಡಿ.

47. ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾದ ಗಾಂಧೀವಾದದ ತತ್ವಗಳು ಯಾವುವು ?